# ಮುಗ್ಧತೆಯ ಬೆಳಕಿನಲ್ಲಿ ಬದುಕಿನ ಸತ್ಯಗಳು

## ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು' ಕಾದಂಬರಿಯ ಪಾತ್ರ ಕಿಟ್ಟಿ



**ಮುಸ್ತಾಫ ಕೆ.ಎಚ್.**

ಕಲೆ: ವಿ.ಎಂ. ಮಂಜುನಾಥ್

ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು' ಕಾದಂಬರಿ ಓದಿದ್ದು ಬಹಳ ಹಿಂದೆ. ಆದರೆ ಪಾತ್ರಗಳು ಕಾಡುತ್ತಿದ್ದರೆ ಕಾದಂಬರಿಯ ಹೆಸರು ಮರೆಯಲು ಹೇಗೆ ಸಾಧ್ಯ? ಅದರಲ್ಲಿಯೂ ಈ ಕಾದಂಬರಿಯಲ್ಲಿ 'ಕಿಟ್ಟಿ' ಎಂಬ ಮುಗ್ಧ ಬಾಲಕನ ಪಾತ್ರ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿದೆ. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಕಿಟ್ಟಿ ಪಾತ್ರ ವ್ಯಕ್ತಿವಿಶಿಷ್ಟ ನಿರೂಪಣೆಗಳ ಹಿನ್ನೆಲೆಯಲ್ಲಿ ಹಲವು ಆಯಾಮಗಳನ್ನು ಪಡೆದುಕೊಂಡು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದೆ. ಆಲನಹಳ್ಳಿ ಅವರ ಕಾದಂಬರಿಗಳಲ್ಲಿ ವ್ಯಕ್ತಿಯೇ ಕೇಂದ್ರ ನೆಲೆಗೆ ಬಂದು ಘಟನೆಗಳು ಪೂರಕವಾಗಿ ವರ್ತಿಸುತ್ತವೆ. ಭುಜಂಗಯ್ಯನಾಗಿರಬಹುದು, ಗೆಂಡೆತಿಮ್ಮನಾಗಿರಬಹುದು, ಕಿಟ್ಟಿಯಾಗಿರಬಹುದು ಸಹಜತೆಯಿಂದ ಸಂಕೀರ್ಣತೆಯ ಕಡೆಗೂ, ಸಂಭ್ರಮದಿಂದ ವಿಷಾದದ ಕಡೆಗೂ ಚಲಿಸುವ ನಾಯಕತ್ವ ಗುಣಗಳಿದ್ದರೂ ಅಸಾಮಾನ್ಯವಲ್ಲದ ಬದುಕಿನ ನಿರ್ವಿಕಾರಗಳನ್ನು ನೋಡುತ್ತಲೇ ಮುಕ್ತಾಯಗೊಳ್ಳುವ ಪಾತ್ರವಾಗಿ ಕಾಣಿಸುತ್ತವೆ.

ಕಿಟ್ಟಿಯ ಪಾತ್ರದ ಮೂಲಕ 70-80ರ ದಶಕದ ಗ್ರಾಮೀಣ ಬದುಕಿನ ನವಿರಾದ ಅನುಭೂತಿಯನ್ನು, ಹಳೆ ಮೈಸೂರು ಭಾಗದ ಸಾಂಸ್ಕೃತಿಕ ಅನನ್ಯತೆಯನ್ನು ಕಾಣಬಹುದು. ಈ ಪಾತ್ರ ನನ್ನ ಭಾವಪ್ರಪಂಚಕ್ಕೆ ತಾಕಲು ಹಲವು ಕಾರಣಗಳಿವೆ. ಮೊದಲನೆಯದು ತುಂಬು ಸಂಸಾರದಲ್ಲಿ ಬೆಳೆದ ನನಗೆ ಉಮ್ಮನಿಗಿಂತಲೂ ಅತ್ತೆಯ ಮಡಿಲು ಬೆಚ್ಚನೆಯ ತಾಣವಾಗಿತ್ತು. ಗಂಡ ಬಿಟ್ಟು ಹೋದದ್ದರಿಂದ ಅವರು ಇಬ್ಬರು ಮಕ್ಕಳ ಜೊತೆಗೆ ನಮ್ಮ ಮನೆಯಲ್ಲಿಯೇ ಇದ್ದರು. ಕಿಟ್ಟಿಗೂ ಹಾಗೇ, ಅತ್ತೆ ಕಮಲಮ್ಮಳೇ ಸರ್ವಸ್ವ. ಪ್ರಕೃತಿಯ ಬಗ್ಗೆ ಅಪಾರ ಕೌತುಕವಿರುವ ಕಿಟ್ಟಿಗೆ ಸಾವು ಮತ್ತು ಭಯ ಎರಡು ಸಹ ಸಹಿಸಲಸಾಧ್ಯವಾದ ಭಾವಗಳೇ ಆಗಿವೆ. ನನಗೂ ಹಾಗೇ. ಒಂದು ಕಾಲಕ್ಕೆ ನಾನು